## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 38(278) |
| ಸದಸ್ಯರ ಹೆಸರು | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | 15.02.2024 |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ | ಪ್ರಶ್ನೆಗಳು | ಕ್ರಮ |
|---|---|---|
| ಅ | ರಾಜ್ಯದಲ್ಲಿನ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಪ್ರೊಬೇಷನರಿ ಹುದ್ದೆಗಳ ಸಂಖ್ಯೆ ಎಷ್ಟು; ಇಲಾಖಾವಾರು ಹಾಗೂ ಹುದ್ದೆವಾರು ಮಾಹಿತಿ ನೀಡುವುದು; | ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಲ್ಲಿ ಆರ್ಥಿಕ ಇಲಾಖೆಯು ಸಹಮತಿಸಿರುವಂತೆ 2023-24ನೇ ಸಾಲಿಗೆ ಒಟ್ಟು 384 ಹುದ್ದೆಗಳು ಮತ್ತು 2024-25ನೇ ಸಾಲಿಗೆ 80 ಹುದ್ದೆಗಳ ಇಲಾಖಾವಾರು ಮತ್ತು ಹುದ್ದೆವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಿದೆ. |
| ಆ | ಎಷ್ಟು ವರ್ಷಗಳಿಂದ ಈ ಹುದ್ದೆಗಳು ಖಾಲಿ ಇವೆ; ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ಯಾವ ಕಾಲಮಿತಿಯೊಳಗೆ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಲಾಗುವುದು; ಮತ್ತು ನೇಮಕಾತಿ ಪ್ರಕ್ರಿಯೆ ಯಾವಾಗ ಪೂರ್ಣಗೊಳ್ಳಲಿದೆ; | 2020-21ನೇ ಸಾಲಿನಿಂದ ಖಾಲಿ ಇರುವ ಸದರಿ ಹುದ್ದೆಗಳಲ್ಲಿ 2023-24ನೇ ಸಾಲಿಗೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ನೇಮಕಾತಿಗಾಗಿ ಒಟ್ಟು 384 ಹುದ್ದೆಗಳನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗಿದೆ. |
| ಇ | ಹಲವಾರು ವರ್ಷಗಳಿಂದ ಖಾಲಿ ಇರುವ ಪ್ರೊಬೇಷನರಿ ಹುದ್ದೆಗಳನ್ನು ಭರ್ತಿ ಮಾಡದಿರುವುದರಿಂದ ರಾಜ್ಯದಲ್ಲಿನ ಅನೇಕ ಯುವಕರ ವಯೋಮಿತಿ ಮೀರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರದ ಕ್ರಮ ಹಾಗೂ ನಿಲುವೇನು? (ಸಂಪೂರ್ಣ ಮಾಹಿತಿ ನೀಡುವುದು) | 2023-24ನೇ ಸಾಲಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ಗೆಜೆಟೆಡ್ ಪ್ರೊಬೇಷನರ್ಸ್ ಗ್ರೂಪ್-ಎ ಮತ್ತು ಗ್ರೂಪ್-ಬಿ ರಿಕ್ತ ಸ್ಥಾನಗಳನ್ನು ತುಂಬಲು ಹೊರಡಿಸುವ ಅಧಿಸೂಚನೆಯಲ್ಲಿ ಅರ್ಹರಿರುವ ಎಲ್ಲಾ ಅಭ್ಯರ್ಥಿಗಳಿಗೆ 3 ವರ್ಷಗಳ ವಯೋಮಿತಿ ಸಡಿಲಿಸಿ ಆದೇಶ ಹೊರಡಿಸಲಾಗಿದ್ದು, ಪ್ರತಿಯನ್ನು ಅನುಬಂಧ-2ರಲ್ಲಿ ನೀಡಿದೆ. |

ಸಂಖ್ಯೆ: ಸಿಆಸುಇ 24 ಎಸ್‌ಎಸ್‌ಸಿ 2023

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ

## ಅನುಬಂಧ

**(ಗ್ರೂಪ್ – ಎ ಹುದ್ದೆಗಳು)**
**(Group – A posts)**

| ಕ್ರ.ಸಂ | ಇಲಾಖೆ | ಹುದ್ದೆಗಳು | 2023-24 | 2024-25 |
|---|---|---|---|---|
| 01 | ಸಿಆಸುಇ | ಸಹಾಯಕ ಆಯುಕ್ತರು (ಕಿರಿಯ ಶ್ರೇಣಿ) | 40 | 40 |
| 02 | ವಾಣಿಜ್ಯ ತೆರಿಗೆ ಇಲಾಖೆ | ಸಹಾಯಕ ಆಯುಕ್ತರು | 41 | - |
| 03 | ಖಜಾನೆ ಇಲಾಖೆ | ಸಹಾಯಕ ನಿರ್ದೇಶಕರು | 2 | - |
| 04 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಕಾರ್ಯನಿರ್ವಾಹಕ ಅಧಿಕಾರಿ/ಸಹಾಯಕ ಕಾರ್ಯದರ್ಶಿ | 40 | 15 |
| 05 | ಒಳಾಡಳಿತ ಇಲಾಖೆ | ಡಿವೈಎಸ್‌ಪಿ | 9 | - |
| 06 | ಸಮಾಜ ಕಲ್ಯಾಣ ಇಲಾಖೆ | ಸಹಾಯಕ ನಿರ್ದೇಶಕರು | 20 | - |
| 07 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ | 7 | - |
| | **ಒಟ್ಟು ಹುದ್ದೆಗಳು** | | **159** | **55** |

**(ಗ್ರೂಪ್ – ಬಿ ಹುದ್ದೆಗಳು)**
**(Group – B posts)**

| ಕ್ರ.ಸಂ | ಇಲಾಖೆ | ಹುದ್ದೆಗಳು | 2023-24 | 2024-25 |
|---|---|---|---|---|
| 01 | ಕಂದಾಯ ಇಲಾಖೆ | ತಹಶೀಲ್ದಾರ್ ಗ್ರೇಡ್-2 | 51 | 25 |
| 02 | ವಾಣಿಜ್ಯ ತೆರಿಗೆ ಇಲಾಖೆ | ವಾಣಿಜ್ಯ ತೆರಿಗೆ ಅಧಿಕಾರಿ | 59 | - |
| 03 | ಕಾರ್ಮಿಕ ಇಲಾಖೆ | ಕಾರ್ಮಿಕ ಅಧಿಕಾರಿ | 4 | - |
| 04 | ಒಳಾಡಳಿತ ಇಲಾಖೆ (ಕಾರಾಗೃಹ) | ಸಹಾಯಕ ಅಧೀಕ್ಷಕರು | 3 | - |
| 05 | ಸಹಕಾರ ಇಲಾಖೆ | ಸಹಕಾರ ಸಂಘಗಳ ಸಹಾಯಕ ನಿಬಂಧಕರು | 12 | - |
| 06 | ಸಹಕಾರ ಇಲಾಖೆ | ಲೆಕ್ಕಪರಿಶೋಧನೆ ಸಹಾಯಕ ನಿರ್ದೇಶಕರು | 9 | - |
| 07 | ಆರ್ಥಿಕ ಇಲಾಖೆ (ಅಬಕಾರಿ) | ಅಬಕಾರಿ ಉಪಅಧೀಕ್ಷಕರು | 10 | - |
| 08 | ಕೌಶಲ್ಯಾಭಿವೃದ್ಧಿ ಇಲಾಖೆ | ಉದ್ಯೋಗಾಧಿಕಾರಿ | 3 | - |
| 09 | ಯುವ ಸಬಲೀಕರಣ & ಕ್ರೀಡಾ ಇಲಾಖೆ | ಸಹಾಯಕ ನಿರ್ದೇಶಕರು | 4 | - |
| 10 | ನಗರಾಭಿವೃದ್ಧಿ ಇಲಾಖೆ | ಮುಖ್ಯಾಧಿಕಾರಿ ಗ್ರೇಡ್-1 | 1 | - |
| 11 | ಆರ್ಥಿಕ ಇಲಾಖೆ (ಖಜಾನೆ) | ಸಹಾಯಕ ಖಜಾನಾಧಿಕಾರಿ | 46 | - |
| 12 | ಆಹಾರ ನಾಗರೀಕ ಸರಬರಾಜು ಇಲಾಖೆ | ಸಹಾಯಕ ನಿರ್ದೇಶಕರು | 9 | - |
| 13 | ಪ್ರವಾಸೋದ್ಯಮ ಇಲಾಖೆ | ಸಹಾಯಕ ನಿರ್ದೇಶಕರು | 2 | - |
| 14 | ಸಿಆಸುಇ (ಸಿಬ್ಬಂದಿ) | ಶಾಖಾಧಿಕಾರಿ | 5 | - |
| 15 | ಸಮಾಜ ಕಲ್ಯಾಣ ಇಲಾಖೆ | ಸಹಾಯಕ ನಿರ್ದೇಶಕರು ಗ್ರೇಡ್-2 | 7 | - |
| | **ಒಟ್ಟು ಹುದ್ದೆಗಳು** | | **225** | **25** |

ಅನುಬಂಧ-2

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ** :2023-24ನೇ ಸಾಲಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ಗೆಜೆಟೆಡ್ ಪ್ರೊಬೇಷನರ್ಸ್ ಗ್ರೂಪ್-ಎ ಮತ್ತು ಗ್ರೂಪ್-ಬಿ ರಿಕ್ತ ಸ್ಥಾನಗಳನ್ನು ತುಂಬಲು ಹೊರಡಿಸುವ ಅಧಿಸೂಚನೆಯಲ್ಲಿ ಅರ್ಹರಿರುವ ಎಲ್ಲಾ ಅಭ್ಯರ್ಥಿಗಳಿಗೆ ವಯೋಮಿತಿ ಸಡಿಲಿಕೆ ನೀಡುವ ಕುರಿತು.

* * *

**ಪ್ರಸ್ತಾವನೆ:-**

ಕೆಲವು ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆ ಆಕಾಂಕ್ಷಿಗಳು ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿ ಕೋವಿಡ್-19 ಸಾಂಕ್ರಾಮಿಕ ರೋಗ ಮತ್ತು ಇತರೆ ಕಾರಣದಿಂದ ಗೆಜೆಟೆಡ್ ಪ್ರೊಬೇಷನರ್ಸ್ ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗೆ ನೇಮಕಾತಿಗಾಗಿ 2021ನೇ ಸಾಲಿನಿಂದ ಪರೀಕ್ಷೆಯನ್ನು ನಡೆಸಿಲ್ಲವಾದ್ದರಿಂದ ಅನೇಕ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆ ಆಕಾಂಕ್ಷಿಗಳು ನೇಮಕಾತಿಗಾಗಿ ನಿಗಧಿಪಡಿಸಿರುವ ಗರಿಷ್ಠ ವಯೋಮಿತಿಯನ್ನು ಮೀರಿ ಉದ್ಯೋಗದಿಂದ ವಂಚಿತರಾಗುತ್ತಿರುವ ಕಾರಣ ಕರ್ನಾಟಕ ಲೋಕಸೇವಾ ಆಯೋಗದಿಂದ ಅಧಿಸೂಚನೆಗೊಳ್ಳಲಿರುವ ಗೆಜೆಟೆಡ್ ಪ್ರೊಬೇಷನರ್ಸ್ ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗಳಿಗೆ ಹಾಜರಾಗಲು ಗರಿಷ್ಠ ವಯೋಮಿತಿಯನ್ನು ಸಡಿಲಿಸಿ ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿರುತ್ತಾರೆ.

ಮೇಲೆ ಪ್ರಸ್ತಾಪಿಸಿರುವ ಅಂಶಗಳನ್ನು ಸರ್ಕಾರವು ಪರಿಶೀಲಿಸಿ, 2023-24ನೇ ಸಾಲಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ ಅಧಿಸೂಚಿಸಲ್ಪಡುವ ಗ್ರೂಪ್-ಎ ಮತ್ತು ಗ್ರೂಪ್-ಬಿ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳನ್ನು ತುಂಬಲು ಹೊರಡಿಸುವ ಅಧಿಸೂಚನೆಗೆ ಮಾತ್ರ ಅನ್ವಯವಾಗುವಂತೆ, ನಿಯಮಗಳನ್ವಯ ಅರ್ಹವಿರುವ ಎಲ್ಲ ಅಭ್ಯರ್ಥಿಗಳಿಗೆ 3 ವರ್ಷಗಳ ವಯೋಮಿತಿ ಸಡಿಲಿಕೆ ನೀಡಲು ತೀರ್ಮಾನಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 138 ಎಸ್ಎಸ್‌ಸಿ 2023; ಬೆಂಗಳೂರು, ದಿನಾಂಕ:24.01.2024.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ಗೆಜೆಟೆಡ್ ಪ್ರೋಬೆಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇಮಕಾತಿ) ನಿಯಮಗಳು, 1997 ರನ್ವಯ 2023-24ನೇ ಸಾಲಿಗೆ ಕರ್ನಾಟಕ ಲೋಕಸೇವಾ ಆಯೋಗವು ರಿಕ್ತ ಸ್ಥಾನಗಳಿಗೆ ಹೊಸದಾಗಿ ಹೊರಡಿಸಲಿರುವ ಅಧಿಸೂಚನೆಯಲ್ಲಿ ಈಗಿರುವ ನಿಯಮಗಳ ಮೇಲೆ ಎಲ್ಲಾ ವರ್ಗಗಳ ಅರ್ಹ ಅಭ್ಯರ್ಥಿಗಳಿಗೆ ಒಂದು ಬಾರಿ (One time Measure) ಗರಿಷ್ಠ ವಯೋಮಿತಿಯನ್ನು (Upper age limit) ಮೂರು ವರ್ಷಗಳಿಗೆ ಹೆಚ್ಚಿಸಿ ಸರ್ಕಾರವು ಆದೇಶಿಸಿದೆ.

ಈ ಆದೇಶವನ್ನು ಸಚಿವ ಸಂಪುಟ ಸಭೆಯ ಪ್ರಕರಣ ಸಂ:ಸಿ.17/2024 ದಿನಾಂಕ05.01.2024ರಲ್ಲಿನ ನಿರ್ಣಯದಂತೆ ಹೊರಡಿಸಿದೆ.

---

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

D. Chandrakala

(ಡಿ.ಚಂದ್ರಕಲ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವೆಗಳು-7).

**ಇವರಿಗೆ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು,
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು,
3. ಸರ್ಕಾರದ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನ ಸೌಧ, ಬೆಂಗಳೂರು.
4. ಅಧ್ಯಕ್ಷರು, ಕರ್ನಾಟಕ ಲೋಕಸೇವಾ ಆಯೋಗ,
5. ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು.
6. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
7. ಜಂಟಿ ಕಾಯದರ್ಶಿ, ಸಚಿವ ಸಂಪುಟ ಶಾಖೆ, (ಪ್ರಕರಣ ಸಂ:ಸಿ.17/2014),
8. ಸರ್ಕಾರದ ಉಪ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು), ವಿಧಾನ ಸೌಧ, ಬೆಂಗಳೂರು.
9. ಕಛೇರಿ ಪ್ರತಿ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.